ಚಿತ್ರಪ್ರಭ

ಶಿವರಾಜ್‌ಕುಮಾರ್, ಸದಾ...ಮೈಲಾರಿ

ಆಪರೇಷನ್

ಅಂತ

ಯಂಗಿದ್ದ? ಯಂಗಾಗ್ಬುಟ್ಟ!

ಡಾವೆಂಕಿ

ಮಾಜಿ ಉಪಮುಖ್ಯಮಂತ್ರಿಯೊಬ್ಬರು 'ನಾನು ಪೂರ್ತಿ ಶುದ್ಧ ಅಂತ ಹೇಳಕ್ಕಿಲ್ಲ ಕಣ್ರೀ' ಎಂದು ಹೇಳುವಾಗ ಲೋಕಾಯುಕ್ತರೂ ಅಲ್ಲೇ ಇದ್ದರು. ಭ್ರಷ್ಟಾಚಾರ ಎಂಬುದು ಲೋಕಾರೂಢಿಯಾಗಿರುವಾಗ ಇದನ್ನೆಲ್ಲ ಪ್ರತಿಭಟಿಸುತ್ತಿದ್ದ ನಮ್ಮ ಸಿನಿಮಾಗಳ ಆ್ಯಂಗ್ರಿ ಯಂಗ್ ಮ್ಯಾನ್ ಏನು ಮಾಡಿದ?

ಒಂದು ಕಾಲವಿತ್ತು ಹೆಂಡತಿಗೆ ಗೊತ್ತಾಗದ ಹಾಗೆ ಗಂಡ ಲಂಚ ತೆಗೆದುಕೊಳ್ಳುತ್ತಿದ್ದ, ಈಗ ಕಾಲ ಬದಲಾಗಿದೆ. ಹೆಂಡತಿಯೇ ಆ ಲಂಚದ ಲೆಕ್ಕ ಇಡುತ್ತಾಳೆ! ಈಗ ಭ್ರಷ್ಟಾಚಾರಕ್ಕೆ ಕುಟುಂಬದ ಸೀಲ್ ಬಿದ್ದಿದೆ.

'ದೀವಾರ್'ನಲ್ಲಿ ಕೆಟ್ಟ ಮಾರ್ಗದಲ್ಲಿ ದುಡಿಯುತ್ತಿರುವ ಅಮಿತಾಬ್ ಬಚ್ಚನ್ (ಅಣ್ಣ) – ಪ್ರಾಮಾಣಿಕ ಪೊಲೀಸ್ ಶಶಿಕಪೂರ್‌ಗೆ (ತಮ್ಮ) ನಿಗೆ ಉದ್ದುದ್ದ ಡಯಲಾಗ್‌ನಲ್ಲಿ 'ನನ್ನ ಹತ್ರ ಕಾರಿದೆ, ಬಂಗಲೆಯಿದೆ, ನಿನ್ ಹತ್ರ ಏನಿದೆ' ಎಂದು ಕೇಳುವಾಗ , ಪೊಲೀಸ್ ತಮ್ಮ ಹೇಳುತ್ತಾನೆ, 'ಮೇರೆ ಪಾಸ್ ಮಾ ಹೈ'. ಇದನ್ನೇ ತಮ್ಮ ಭಾಷಣದಲ್ಲಿ ಜಯಂತ್ ಕಾಯ್ಕಿಣಿ ಒಮ್ಮೆ ಹೇಳಿದ್ದರು; ಯಾವುದಾದರೂ ಹುಡುಗಿಗೆ ಈ ಕಾಲದಲ್ಲಿ 'ನನ್ನ ಹತ್ರ ಕಾರಿಲ್ಲ, ಬಂಗಲೆಯಿಲ್ಲ, ಅಮ್ಮ ಇದ್ದಾಳೆ' ಎಂದರೆ, ಅವಳು, 'ಕಾರಿಲ್ಲ, ಬಂಗಲೇನೂ ಇಲ್ಲ, ಸಾಲದ್ದಕ್ಕೆ ಜೊತೆಗೆ ಅಮ್ಮ ಬೇರೆ ಇದ್ದಾಳಾ!?' ಎಂದು ಕೇಳುತ್ತಾಳಂತೆ! (ಹೀಗಿದ್ದರೆ ಈಗ ಅಮ್ಮ ಕೂಡಾ ಜೊತೆಗಿರೋಲ್ಲ!!)



'ದೀವಾರ್' ಬಿಡುಗಡೆಯ ಅಂದಿನ ಮಧ್ಯಮ ವರ್ಗಕ್ಕೂ ಇಂದಿನ ಮಧ್ಯಮ ವರ್ಗಕ್ಕೂ ಸಿಕ್ಕಾಪಟ್ಟೆ ವ್ಯತ್ಯಾಸವಿದೆ. ಈಗ ಭ್ರಷ್ಟಾಚಾರ ಒಂದು ಕೌಟುಂಬಿಕ ವ್ಯವಹಾರ. ಮಕ್ಕಳಿಗೂ ಗೊತ್ತಿರುತ್ತದೆ. ಒಂದು ರೀತಿಯಲ್ಲಿ ಮನ, ಮನೆ, ಮನಸ್ಸುಗಳನ್ನು ವ್ಯಾಪಿಸಿರುವಂಥದು, ಅದು!

ಆದರೆ ಮೊದಲು ಹೀಗಿರಲಿಲ್ಲ. ಕಡೇಪಕ್ಷ ಸಿನಿಮಾಗಳಲ್ಲಾದರೂ ಭ್ರಷ್ಟಾಚಾರದ ವಿರುದ್ಧ ಹೋರಾಡಲಿಕ್ಕೆ ಒಬ್ಬ ಆ್ಯಂಗ್ರಿ ಯಂಗ್ ಮ್ಯಾನ್ ಇದ್ದ. 'ಅಂತ' 'ಚಕ್ರವ್ಯೂಹ' 'ಗಜೇಂದ್ರ'ದ ಅಂಬರೀಷ್ ನಮಗೆ ಭ್ರಷ್ಟರನ್ನೆಲ್ಲ ಶೂಟ್ ಮಾಡಿದಾಗ, 'ಅಕ್ಕಿ ಇಲ್ಲ ಬೇಳೆ ಇಲ್ಲ' ಎಂದು ನಮ್ಮ ದುಗುಡಗಳನ್ನು ಹೇಳಿದಾಗ ನಮ್ಮ ಕೋಪಕ್ಕೊಬ್ಬ 'ಕನ್ನಡಿ'ಗ ಸಿಕ್ಕಂತಾಗಿತ್ತು. ಆಗ ಮನುಷ್ಯರಲ್ಲೂ ಸ್ವಲ್ಪ 'ವ್ಯವಹಾರ ಜ್ಞಾನ' ಈಗ ಇರುವಷ್ಟು ಇರದ ಕಾರಣ ಅದೆಲ್ಲಾ ನಮಗೆ ಸೊಗಸೆನ್ನಿಸಿತ್ತೋ ಏನೋ!

ಈಗ ಕೋಟಿಗಟ್ಟಲೆ ಲೂಟಿ ಮಾಡಿದ, ಮಾಡುತ್ತಿರುವ ರಾಜಕಾರಣಿಗಳ ಪೋಸ್ಟರ್‌ಗಳು ದೇವಸ್ಥಾನಗಳ ಮುಂದೆ ರಾರಾಜಿಸುತ್ತಿವೆ. ನಮಗ್ಯಾರಿಗೂ ಅವರ 500 ಕೋಟಿ– 700 ಕೋಟಿ ಸ್ಕ್ಯಾಮ್‌ಗಳನ್ನು ಕಂಡು ಏನೂ ಅನ್ನಿಸುವುದಿಲ್ಲ. ಆಟೋದ ಮನುಷ್ಯ ತನ್ನ ಮೀಟರ್ ಹೃದಯಕ್ಕೇ ಆಘಾತ ಕೊಡುವಷ್ಟು ಇದ್ದಾಗಲೂ ನಾವು ವಾದಿಸುವುದಿಲ್ಲ. ಸರ್ಕಾರಿ ಕಚೇರಿಗಳಲ್ಲಿ ಕೈ ಬಿಸಿ ಮಾಡಿಯೇ ಕೆಲಸ ಮಾಡಿಸಿಕೊಳ್ಳುವ ನಾವು ಅದಕ್ಕೆಲ್ಲ ತಲೆಬಿಸಿ ಮಾಡಿಕೊಳ್ಳುವುದಿಲ್ಲ.

2 ನೇ ಪುಟಕ್ಕೆ

ಹೊಸಾ ಜೋಷ್

ವಿನಾಯಕ್ ಜೋಷಿ ಹಾಜಿರ್ ಹೋ

ದಢಿಯಾ, ಡುಮ್ಮ ಎಂದೆಲ್ಲ ಅನ್ನಿಸಿಕೊಳ್ಳುತ್ತಿದ್ದ ವಿನಾಯಕ ಜೋಷಿಯ ಹೊಸಾ ಲುಕ್ ಇಲ್ಲಿದೆ. ಅನುಮಾನವೇ ಬೇಡ, 'ವಿನಾಯಕ್ ಜೋಷಿ ಹಾಜಿರ್ ಹೋ' ಎಂದು ನೀವು ಕೂಗಿದರೆ ಕನ್ನಡದ ಸ್ಮಾರ್ಟ್ ನಟ ಸ್ಟಾರ್ಟ್ ಆಗಲಿದ್ದಾರೆ... ಅದು ಮಿಂಚಿನ ಓಟ!

ಇವರು ವಿನಾಯಕ್ ಜೋಷಿ. 'ನಮ್ಮೂರ ಮಂದಾರ ಹೂವೇ', 'ಅಮೃತವರ್ಷಿಣಿ' ಚಿತ್ರದ ವಿನಾಯಕ್ ಜೋಷಿ ಎಂದರೆ ಅಚ್ಚರಿ ತುಂಬಿದ ಆಶ್ಚರ್ಯ ಸಹಜ. ಬಹಳ ದಿನಗಳ ನಂತರ ಅವರನ್ನು ಮಾತನಾಡಿಸಿದ ವರಿಗೆ ಕೇವಲ ಅವರ ಲುಕ್ ಅಷ್ಟೇ ಅಲ್ಲ, ಅವರ ಔಟ್‌ಲುಕ್ ಕೂಡ ಬದಲಾಗಿದೆ ಎನಿಸುವುದು ನಿಜ. ಯುವರಾಜ ಚಿತ್ರದ 'ಲುಕ್ ಅಟ್ ಮೈ ಫೇಸ್ ಇನ್ ದ ಮಿರರ್' ಎಂಬ ಹಾಡನ್ನು ಗುನುಗಿಕೊಂಡೇ ತನ್ನ ಜೀವನವನ್ನು ರೂಪಿಸಿಕೊಂಡ ವಿನಾಯಕ ಈಗ ಪ್ರಬುದ್ಧರಾಗಿ ಕಾಣುತ್ತಾರೆ. ಅಪ್ಪನ ಬಳಿ ಪಾಕೆಟ್ ಮನಿ ತೆಗೆದುಕೊಂಡು ಖರ್ಚು ಮಾಡಿ, ಸ್ನೇಹಿತರ ಬಳಿ ಕೈಗಡ ತೆಗೆದುಕೊಂಡು ಅದನ್ನು ತೀರಿಸಲೇಬೇಕೆಂದೇನೂ ಇಲ್ಲ ಎನ್ನುವಂತಿರಬೇಕಾದ ಹುಡುಗಾಟಿಕೆಯ ವಯಸ್ಸಿನಲ್ಲೇ 30 ಲಕ್ಷ ಸಾಲವನ್ನು ಹೆಗಲಿಗೇರಿಸಿಕೊಂಡು ಅದನ್ನು ಜಯಿಸಿದ ಪರಿ ಎಂಥವರಿಗೂ ಸ್ಫೂರ್ತಿ ನೀಡುವಂಥದು. ಮಾಸ್ಟರ್ ವಿನಾಯಕ್ ಜೋಷಿ, ಈಗ ಮಿಸ್ಟರ್ ವಿನಾಯಕ್ ಜೋಷಿ ಎನಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅವರಲ್ಲಾಗಿರುವ ಬದಲಾವಣೆಗಳ ಬಗ್ಗೆ ಎಫ್‌ಎಮ್ ರೇಡಿಯೋನಲ್ಲಿ 'ಆರ್‌ಜೆ' ಆಗಿರುವ 'ವಿಜೆ' ಇಲ್ಲಿ ಮಾತನಾಡಿದ್ದಾರೆ.

2 ನೇ ಪುಟಕ್ಕೆ

ಹರಿ

■ ನಿಖಿ, ಚೇತನ್... ಮಂದಹಾಸ



ವಿಜಯ್ ನಿರ್ದೇಶನಕ್ಕೆ?

'ದುನಿಯಾ' ವಿಜಯ್ ನಿರ್ದೇಶನ ಮಾಡುವುದಕ್ಕೆ ಸಜ್ಜಾಗುತ್ತಿದ್ದಾರೆಯೇ ಎಂಬ ಪ್ರಶ್ನೆ 'ಕಂಠೀರವ' ಚಿತ್ರತಂಡಕ್ಕೆ ಪದೇಪದೇ ಎದುರಾಗಿದೆಯಂತೆ. ಕೋಟಿ ರಾಮು ನಿರ್ಮಿಸುತ್ತಿರುವ ಈ ಚಿತ್ರದ ನಾಯಕ ವಿಜಯ್ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ತುಷಾರ್ ರಂಗನಾಥ್ ಇದರ ನಿರ್ದೇಶಕರು ಎಂದು ತಿಳಿಯದವರು, ತಿಳಿದುಕೊಳ್ಳಬೇಕಾದ ವಿಚಾರ. ಆದರೆ ವಿಜಯ್ ಪ್ರತಿಯೊಂದು ಶಾಟ್‌ನಲ್ಲೂ ತುಷಾರ್ ನಿರ್ದೇಶಿಸಿದ್ದನ್ನು ಬದಲಾಯಿಸುತ್ತ ಇರುತ್ತಾರೆ ಎನ್ನುತ್ತದೆ 'ಕಂಠೀರವ' ತಂಡದ ಮೂಲಗಳು. ಅಂದಹಾಗೆ, 'ದುನಿಯಾ'ದ ನಂತರ ಒಂದೇ ಒಂದು ಹಿಟ್ ಕೊಡದ ವಿಜಯ್ ತಮ್ಮ ದೈಹಿಕ ಕಸರತ್ತಿನ ಜೊತೆಗೆ, ಮೆದುಳಿಗೂ ಕೆಲಸ ಕೊಡುತ್ತಿದ್ದಾರೆ ಎನ್ನುವುದು ಸಂತಸದ ಸುದ್ದಿಯಲ್ಲದೇ ಮತ್ತೇನು?!